**SC No. 23/2024**
**PW.-06**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್.ಸಿ. 23/2024**

| | | |
|---|---|---|
| ಸಾಕ್ಷಿದಾರರ ಹೆಸರು | ಮಂಜುನಾಥ್ ಆರ್.ಆರ್. | ಪ್ರಮಾಣ ವಚನ ಮಾಡಿದ ದಿನಾಂಕ: 26.11.2025 |
| ತಂದೆಯ/ಗಂಡನ ಹೆಸರು | ರಾಜು | |
| ವಯಸ್ಸು | 42 ವರ್ಷ | |
| ವೃತ್ತಿ | ಮುಖ್ಯ ಪೇದೆ, ದೇವರಾಜ ಪೊಲೀಸ್ ಠಾಣೆ | ಪ್ರಾ.ಸಾಃ 06 |
| ವಾಸ ಸ್ಥಳ | ಹೆಬ್ಬಾಳ ಮೈಸೂರು | ಚಾ.ಸಾಃ 17 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ನರಸಿಂಹ ರಾಜ ಪೊಲೀಸ್ ಠಾಣೆಯಲ್ಲಿ *2020* ರಿಂದ *2024* ರವರೆಗೆ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ *13.07.2023* ರಂದು ಪಿ.ಐ ರವರು ನನಗೆ ಮತ್ತು ಚಾಸಾ-*17* ರವರಿಗೆ ಠಾಣಾ ಮೊ.ಸಂಖ್ಯೆ *52/2023* ಕಲಂ *394* ಐಪಿಸಿ ಪ್ರಕರಣದಲ್ಲಿ ಆರೋಪಿ ಮತ್ತು ಮಾಲು ಪತ್ತೆ ಬಗ್ಗೆ ಕರ್ತವ್ಯಕ್ಕೆ ನೇಮಕ ಮಾಡಿದ್ದು ಅದರಂತೆ ನಾವುಗಳು ಠಾಣಾ ಸರಹದ್ದಿನಲ್ಲಿ ಗಸ್ತು ಮಾಡಿ ಮಾಹಿತಿ ಸಂಗ್ರಹಿಸಲಾಗಿ ಬಾತ್ಮಿದಾರರು ನೀಡಿದ ಖಚಿತ ಮಾಹಿತಿ ಎಂತೆ ಮೇಲ್ಕಂಡ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪಿ ಮೈಸೂರು ನಗರದ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾನೆ ಎಂಬ ಖಚಿತ ಮಾಹಿತಿ ಮೇರೆಗೆ ನಾವುಗಳು ಮಧ್ಯಾಹ್ನ *1.30* ಗಂಟೆಗೆ

ಕೆ.ಆರ್. ಆಸ್ಪತ್ರೆಗೆ ಹೋಗಿ ನೋಡಲಾಗಿ ಒಬ್ಬ ಆಸಾಮಿಯೂ ನಮ್ಮಗಳನ್ನು ಕಂಡು ಗಾಬರಿಯಾಗಿ ಓಡಿ ಹೋಗಲು ಪ್ರಯತ್ನಿಸಿದವನನ್ನು ನಾವುಗಳು ಹಿಡಿದು ವಿಚಾರಣೆ ಮಾಡಲಾಗಿ ತನ್ನ ಹೆಸರು ದೀಪು ಬಿನ್ ಪ್ರಕಾಶ್*, 34* ವರ್ಷ*,* ಮಂಡ್ಯ ವಾಸಿ ಎಂದು ತಿಳಿಸಿದ್ದನು. ನಂತರ ನಾವುಗಳು ಆತನನ್ನು ನಮ್ಮನ್ನು ಕಂಡು ಗಾಬರಿಯಾಗಿ ಹೋಗುತ್ತಿದ್ದರ ಬಗ್ಗೆ ವಿಚಾರಿಸಲಾಗಿ ಸಮಂಜಸವಾದ ಉತ್ತರ ಕೊಡಲಿಲ್ಲ ನಂತರ ನಾವು ಪ್ರಶ್ನೆ ಪ್ರತಿ ಪ್ರಶ್ನೆ ಮಾಡಲಾಗಿ ಆತನು ಈಗ್ಗೆ *3* ತಿಂಗಳ ಹಿಂದೆ ಮೈಸೂರಿನ ಹಳೆ ಕೆಸರೆ ಗ್ರಾಮದಲ್ಲಿ ಒಬ್ಬ ಮಹಿಳೆಯಿಂದ ಆಕೆಯ ಮೇಲೆ ಹಲ್ಲೆ ನಡೆಸಿ ಚಿನ್ನಾಭರಣಗಳನ್ನು ಕಿತ್ತುಕೊಂಡು ಹೋಗಿರುತ್ತೇನೆ ಎಂದು ತಿಳಿಸಿದ್ದನು. ನಾವುಗಳು ಈ ಕೃತ್ಯ ದಲ್ಲಿ ಭಾಗಿಯಾಗಿರುವುದನ್ನು ಖಚಿತಪಡಿಸಿಕೊಂಡು ಮಧ್ಯಾಹ್ನ *2.15* ಗಂಟೆಗೆ ಆತನನ್ನು ವಶಕ್ಕೆ ಪಡೆದುಕೊಂಡು ಮಧ್ಯಾಹ್ನ *2.45* ಗಂಟೆಗೆ ಠಾಣೆಗೆ ಕರೆದುಕೊಂಡು ಹೋಗಿ ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿ ವರದಿ ನೀಡಿದ್ದೆನು. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು*,* ಅದನ್ನು ನಿಪಿ.*16* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ. *16(ಎ)* ಎಂದು ಗುರುತಿಸಲಾಯಿತು. ನಾನು ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

ಮಹಜರ್ ಮಾಡುವ ಸಂದರ್ಭದಲ್ಲಿ ತನಿಖಾಧಿಕಾರಿಯವರ ನಿರ್ದೇಶನದ ಮೇರೆಗೆ ಫೋಟೋಗಳನ್ನು ತೆಗೆದಿದ್ದೆ. ಆ ಫೋಟೋಗಳನ್ನು ಇನ್ಸ್‌ಪೆಕ್ಟರ್ ರವರ ರೆಡ್ ಮಿ ಮೊಬೈಲ್ ನಲ್ಲಿ ತೆಗೆದಿದ್ದೆ. ನಾನು ಫೋಟೋಗಳನ್ನು ಪ್ರಿಂಟ್ ಹಾಕಿಸಿ ತನಿಖಾಧಿಕಾರಿಯವರಿಗೆ ಕೊಟ್ಟಿದ್ದೆ ಈ ಬಗ್ಗೆ

ಪ್ರಮಾಣ ಪತ್ರ ವನ್ನು ಕೊಟ್ಟಿದ್ದೆ. ಸಾಕ್ಷಿದಾರರು ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-*17* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-*17(ಎ)* ಎಂದು ಗುರುತಿಸಲಾಯಿತು. ನಾನು ಸದರಿ ಫೋಟೋಗಳ ಸಿಡಿ ಮಾಡಿದ್ದು ಅದನ್ನು ಸಹ ತನಿಖಾಧಿಕಾರಿಯವರಿಗೆ ಕೊಟ್ಟಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು *2* ಸಿ.ಡಿ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-*18* ಮತ್ತು *19* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ-*9* ಮತ್ತು *10* ಎಂದು ಗುರುತಿಸಲ್ಪಟ್ಟಿರುತ್ತವೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :**

ಆರೋಪಿತನನ್ನು ಆತನ ಮನೆಯಿಂದ ಕರೆದುಕೊಂಡು ಬಂದಿದ್ದು, ಕೆ.ಆರ್. ಆಸ್ಪತ್ರೆಯಿಂದ ಕರೆದುಕೊಂಡು ಬಂದಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಒಬ್ಬ ಮಹಿಳೆಯ ಮೇಲೆ ಹಲ್ಲೆ ಮಾಡಿ ಆಕೆಯ ಬಂಗಾರದ ಒಡವೆಗಳನ್ನು ಕಿತ್ತುಕೊಂಡು ಹೋಗಿದ್ದರ ಬಗ್ಗೆ ಹೇಳಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-16 ಅನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿರುವಂತಹ ವರದಿ ಇರುತ್ತದೆ ಎಂದರೆ ಸರಿಯಲ್ಲ. ರೆಡ್ ಮಿ ಮೊಬೈಲ್ ತನಿಖಾಧಿಕಾರಿಯವರದು ಇತ್ತು. ನಾನು ಯಾವ ಲ್ಯಾಬ್ ನಲ್ಲಿ ಮೊಬೈಲ್ ನಲ್ಲಿ ಇದ್ದಂತಹ ಫೋಟೋಗಳನ್ನು ಪ್ರಿಂಟ್ ಹಾಕಿಸಿದ್ದೆ ಎನ್ನುವುದರ ಬಗ್ಗೆ ಹೇಳಿಲ್ಲ. ಲ್ಯಾಬ್ ನಲ್ಲಿ ಫೋಟೋಗಳನ್ನು ಪ್ರಿಂಟ್ ಹಾಕಿಸಿದ ಬಗ್ಗೆ ಎಷ್ಟು ಹಣ ಕೊಟ್ಟಿತ್ತು ಎಂದು ಹೇಳಿರುವುದಿಲ್ಲ.

ಪ್ರಮಾಣ ಪತ್ರದಲ್ಲಿ ರೆಡ್ ಮೀ ಮೊಬೈಲ್ ನ ಸಂಪೂರ್ಣ ವಿವರವನ್ನು ಹೇಳಿರುವುದಿಲ್ಲ. ಮಹಜರ್ ಸಮಯದಲ್ಲಿ ಫೋಟೋಗಳನ್ನು ತೆಗೆದಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದಂತಹ ಫೋಟೋಗಳು ಇರುತ್ತವೆ ಎಂದರೆ ಸರಿಯಲ್ಲ. ನಿಪಿ–16 ಅನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರವಿಚಾರಣೆ: ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**